# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



## ಸಭೆಯು ಸಂಕಟವನ್ನು ಅನುಭವಿಸಿದ್ದು

ಬರಹಗಾರರು: Edward Hughes

ಚಿತ್ರಲೇಖಕರು: Janie Forest

ಅಳವಡಿಸುವವರು: Ruth Klassen
Alastair Paterson
ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2020 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸು ಕ್ರಿಸ್ತನು ಪರಲೋಕ್ಕೆ ಎತ್ತಲ್ಪಟ್ಟ ೫೦ ದಿನಗಳ ನಂತರ ಆತನ ಹಿಂಬಾಲಕರ ಮೇಲೆ ಪವಿತ್ರಾತ್ಮನು ಬಂದನು. ಅದರೆ ತಂದೆ, ಮಗ, ಪವಿತ್ರಾತ್ಮನು ಒಂದೆ ಎಂದು ಶಿಷ್ಯರಿಗೆ ಅರ್ಥವಾಗಲಿಲ್ಲ. ಅದರೆ ದೇವರು ಅವರ ಮದ್ಯದಲ್ಲಿಟ್ಟುಕೊಳ್ಳವುದಕ್ಕೆ ಅವರು ಬಹಳ ಸಂತೋಷವುಳ್ಳವರಾಗಿದ್ದರು ಮತ್ತು ದೇವರು ಅವರ ಮದ್ಯ ಅನೇಕ ಅದ್ಭುತಗಳನ್ನು ಮಾಡಿ ಯೇಸುವಿನ ಸಂದೇಶವನ್ನು ಜನರಿಗೆ ತಿಳಿಸಲು ಸಹಾಯ ಮಾಡಿದನು.



ಅದನ್ನು ಕೇಳಿ ಜನರು ಯೇಸುವನ್ನು ನಂಬಿದರು, ಅವರಿಗೆ ಆದರಣೆವುಂಟಾಯಿತು, ಆದರೆ ಆನನೀಯ ಮತ್ತು ಸಪ್ಫೈರಳು ಎಂಬ ದಂಪತಿಗಳು ದೇವರನು ಅಗೌರವಿಸಿದರು. ಅವರು ತಮಗಿರುವ ಸ್ಥಳವನ್ನು ಮಾರಿ ಬಂದ ಹಣದಲ್ಲಿ ತಮಗಾಗಿ ಸಲ್ಪ ಬಚ್ಚಿಟ್ಟುಕೊಂಡು ಉಳಿದಿದ್ದನ್ನು ಅಪೋಸ್ತಲರ ಬಳಿಗೆ ಕೊಡಲು ತಂದರು.



‘ಪವಿತ್ರಾತ್ಮನಿಗೆ ವಿರೋದವಾಗಿ ಸುಳ್ಳು ಹೇಳುವುದಕ್ಕೆ ಸೈತಾನನು ನಿಮ್ಮ ಹೃದಯದಲ್ಲಿ ತುಂಬಿಕೊಂಡಿದ್ದೆನು...?’ ಎಂದು ಪೇತ್ರನು ಅನನೀಯನನು ಕೇಳಿದನು.



‘ನೀವು ಸುಳ್ಳಾಡಿದ್ದು ಮನುಷ್ಯರಿಗಲ್ಲ ದೇವರಿಗೆ’ ಎಂದು ಹೇಳಿದಾಕ್ಷಣ ಅನನೀಯನು ಬಿದ್ದು ಅಲ್ಲೆ ಸತ್ತನು. ಯೌವನಸ್ಥರು ಅವನ ಶರೀರವನ್ನು ವಸ್ತ್ರದಲ್ಲಿ ಸುತ್ತಿ ಹೊತ್ತುಕೊಂಡು ಹೋಗಿ ಹೂಣಿಟ್ಟರು.



ಈ ಸುದ್ದಿಯನ್ನು ತಿಳಿದ ಸಪ್ರೈರಳು ಬಂದಳು, ಅವಳು ಹಾಗೆಯೆ ಹೇಳಿದಳು ಅವಳು ಸತ್ತಳು ಈ ಸುದಿಯನ್ನು ಕೇಳಿದ ಎಲ್ಲರಲ್ಲಿಯು ಭಯವುಂಟಾಯಿತು.





ದೇವರಾದ
ಪವಿತ್ರಾತ್ಮನು
ಅಪೊಸ್ತಲರ
ಮೂಲಕವಾಗಿ
ಅನೇಕ ಆದ್ಭುತ
ಸೂಚಕ ಕಾರ್ಯವನ್ನು
ಮಾಡಿದನು ಮತ್ತು ಪೇತ್ರನ
ನೆರಳು ಯಾರಾರ ಮೇಲೆ

ಬೀಳುತ್ತಿತೊ ಅವರಿಗೆಲ್ಲ
ಸೌಖ್ಯವಾಗುತ್ತಿತು.

ಇಂತಹ ಕಾರ್ಯವನ್ನು
ನೋಡಿದ ಅನೇಕ ಜನರು
ಯೇಸುವಿನ ಮೇಲೆ
ನಂಬಿಕೆಯನ್ನಿಟ್ಟರು.
ಇದನ್ನು ನೋಡಿದ
ಮಹಾ ಯಾಜಕರಿಗೆ ಸಿಟ್ಟು
ಬಂದು ಅವರನ್ನು ಹಿಡಿದು
ಸರಮನೆಗಳಲ್ಲಿ ಹಾಕಿದರು.





ದೇವರು ತನ್ನ
ದೂತನನ್ನು
ಕಳಿಸಿ ಅವರನ್ನು
ಸರಮನೆಯಿಂದ ಹೊರ
ತಂದು, ದೇವರು ಅವರನ್ನು
ದೇವಾಲಯದ ಮುಂಬಾಗದಲ್ಲಿ ನಿಂತು ಯೇಸುವಿನ ಸಂದೇಶವನ್ನು ಹೇಳುವಂತೆ ಮಾಡಿದನು. ಅವರು ಯೇಸುವಿನ ಕುರಿತು ಪ್ರಸಂಗಿಸಲು ಪ್ರಾರಂಬಿಸಿದರು. ಯಾಜಕರು ಬಂದು ಸರಮನೆಯನ್ನು ನೋಡಿದಾಗ ಆದು ಖಾಲಿಯಾಗಿತ್ತು.

ಅದನ್ನು ನೋಡಿದ ಮಹಾ ಯಾಜಕರು ಅವರನ್ನು ಗದರಿಸಿ ನೀವು ಆ ಹೆಸರನ್ನು ಎತ್ತಬಾರದು ಎಂದು ನಾವು ನಿಮ್ಮನ್ನು ಎಚ್ಚರಿಸಿರಲಿಲ್ಲವೇ? ಎಂದು ಅವರನ್ನು ಕೇಳಿದರು. ಆಗ ಪೇತ್ರನು ಮತ್ತು ಉಳಿದ ಅಪೋಸ್ತಲರು 'ದೇವರ ಮಾತನ್ನು ಕೇಳುವುದಕ್ಕಿಂತ ನಿಮ್ಮ ಮಾತನ್ನು ಕೇಳುವುದು ಯುಕ್ತಯೋ' ಎಂದು ಹೇಳಿದಾಗ ಮಹಾ ಯಾಜಕರಿಗೆ ಅವರನ್ನು ಕೊಲ್ಲುವಂತ ಕೋಪ ಬಂತು.

ಆದರೆ ಹಾಗೆ ಮಾಡದೆ
ಅವರನ್ನು ಹೊಡೆಸಿ
ಬಿಟ್ಟು ಬಿಟ್ಟರು.



ಅಂತಹ ನೋವಿನಲ್ಲಿಯು ಅಪೋಸ್ತಲರು ದೇವರ ವಾಕ್ಯವನ್ನು ಸಾರುವವರಾದರು.



ಸ್ತೆಪನನು ಎಂಬುವಂತ ಯುವನಸ್ಥನು ಹಿಡಿಯಲ್ಪಟ್ಟನು, ಅವನು ದೇವರನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಪವಿತ್ರಾತ್ಮನು ಅವನಿಗೆ ಯೇಸುವಿನ ಸಂದೇಶವನ್ನು ಹೇಳುವಂತೆ ಪ್ರೇರೆಪಿಸಿದನು, ಅದನು ಕೇಳಿದ ಕೆಲವರು ಅವನು ದೇವರಿಗೆ ವಿರೋದವಾಗಿ ಮಾತಾಡುತ್ತಾನೆಂದು ಹೇಳಿದರು. ಮತ್ತು ಅವನು ಯೇಸುವಿನ ಮೇಲೆ ನಂಬಿಕೆಯನ್ನಿಟ್ಟದ್ದ ಕಾರಣದಿಂದ ಅವನನ್ನು ಕಲ್ಲುಗಳಿಂದ ಹೊಡೆದು ಸಾಯಿಸಿದರು.



ಸ್ತೆಪನನು ಸಾಯುವ ಸಂದರ್ಭದಲ್ಲಿ
ಪವಿತ್ರಾತ್ಮ ಭರಿತನಾಗಿದ್ದು
ಪರಲೋಕವು
ತರೆದಿರುವುದನ್ನು
ಕಂಡನು ಅಲ್ಲಿ
ಯೇಸುವು
ಮಹಿಮೆಯಿಂದ
ತಂದೆಯ
ಬಲಬಾಗದಲ್ಲಿ
ನಿಂತಿರುವುದನ್ನು
ಕಂಡನು.



ಆತನು ಸಾಯುವಾಗ ‘ದೇವರೆ
ಇವರು ಮಾಡಿದ ತಪ್ಪುಗಳನ್ನು
ಇವರ ಮೇಲೆ ಹೊರಿಸದೆ
ಇವರನ್ನು ಕ್ಷಮಿಸು’
ಎಂದು ಹೇಳಿ ‘ನನ್ನ
ಆತ್ಮವನ್ನು ಸೇರಿಸಿಕೊ’
ಎಂದು ಕೂಗಿ
ಪ್ರಾಣ ಬಿಟ್ಟನು.



ಸ್ತೆಫನನ ಸಾವಿನಿಂದ ದೊಡ್ಡ ಹಿಂಸೆ ಪ್ರಾರಂಭವಾಯಿತು. ಅಲ್ಲಿ ಒಬ್ಬ ಯೌವನಸ್ಥನಾದ ಸೌಲನೆಂಬುವವನು ಸ್ತೆಫನನ ಸಾವಿಗೆ ಸಹಾಯ ಮಾಡಿದ್ದನು. ಕ್ರಿಸ್ತನನ್ನು ನಂಬಿದ ಜನರನ್ನು ಹಿಡಿದು ಸೆರಮನೆಗಳಲ್ಲಿ ಹಾಕುತ್ತಿದ್ದನು. ಅದನ್ನು ನೋಡಿದ ಅನೇಕರು ಯುದಾಯ, ಮತ್ತು ಸಮಾರ್ಯಸೀಮೆಗಳಿಗೆ ಚದರಿದರು. ಆದರೆ ಅಪೋಸ್ತಲರು ಮಾತ್ರವೇ ಯೇರುಸಲೇಮ್‌ನಲ್ಲಿ ಇದ್ದರು.



ಆದರೂ ಅವರ ವೈರಿಗಳು ಅವರನ್ನು ಕೊಲ್ಲುವುದಕ್ಕೆ ಹೊಂಚುಹಾಕುತ್ತಿದ್ದರು. ಅಲ್ಲಿಂದ ಚದರಿದ್ದ ಜನರು ಅವರು ಹೋಗುವ ಕಡೆಗಳೆಲ್ಲ ಶುಭವಾರ್ತೆಯನ್ನು ಸಾರುತ್ತಿದ್ದರು. ಅದನ್ನು ಯಾರಿಂದಲು ನಿಲ್ಲಿಸಲು ಆಗಲಿಲ್ಲ. ಏಕೆಂದರೆ ಪವಿತ್ರಾತ್ಮನು ಅವರಿಗೆ ಸಹಾಯಮಾಡುತ್ತಿದ್ದನು.



ಸಭೆಯು ಸಂಕಟವನ್ನು ಅನುಭವಿಸಿದ್ದು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಅಪೋಸ್ತಲರ ಕೃತ್ಯ **5–7**

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”

ಕೀರ್ತನೆ **119:130**

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16